ಹೃದಯದಲ್ಲಿ. ಬಟ್ ಜಗತ್ತನ್ನೇ ಎದುರು ಹಾಕಿಕೊಳ್ಳೋ ಶಕ್ತಿ ಅದಕ್ಕುಂಟು. ಹೋಗ್ರಯ್ಯ ಮೊದ್ಲು ಹೋಗಿ ಚರಿತ್ರೆ ಪುರಾಣ ಇನ್ನೊಮ್ಮೆ ತಿರುವು ಹಾಕಿ. ಪುಸ್ತಕ ಓದ್ಕೊಂಡು ಯುದ್ಧ ಮಾಡೋಕೆ ಬರ್ಬೇಡಿ... ತೊಲಗಿ ಇಲ್ಲಿಂದ ತಾತ್ಸಾರ ತೋರಿದ ಎಸ್ಐ.

ಎಸ್ಐನನ್ನು ಶಪಿಸುತ್ತಲೇ ಈಚೆ ಬಂದರು. ಅಲ್ಲಲೆ ಸೀನ, ಇವನು ಸತ್ಯವಾಗ್ಲೂ ತಂಗಿನಾ ಸಾಬಿಗೆ ಕೊಟ್ಟು ಲಗ್ನ ಮಾಡ್ತಾನಾ? ಅನುಮಾನಪಟ್ಟ ಶಾಮ. ಮಿಯಾ ಬೀಬಿ ರಾಜಿ ಹೋತೋ ಖಾಜಿ ಕ್ಯಾಕರೇಗಾರೇ. ಶಾದಿಗೆ ಕರೆದ್ರೆ ಹೋಗಿ ಬಿರಿಯಾನಿ ಕತ್ತರಿಸಿ ಬಂದ್ರಾತು. ಸಾಬರು ಬಿರಿಯಾನಿ ಮಸ್ತು ಮಾಡ್ತಾರೆ. ಅದ್ರಾಗೂ ಹೈದ್ರಾಬಾದ್ ಬಿರಿಯಾನಿ ಮೋಸ್ಟ್ ಫೇಮಸ್ ಮಾರಾಯ ಲೊಟ್ಟೆ ಹೊಡೆದ ಬಕರ್ಲಿ ಕಿಟ್ಟಿ. ಥುತ್, ಅವರ ಮದುವೆಗೆ ನಾವೇ ಮುಹೂರ್ತ ಇಟ್ಟಂಗಾತಲ್ಲ ಇದೆಂತ ಕಥೆಯಾಯ್ತು ಮಾರಾಯ ಶಾಮ ನಿಡುಸುಯ್ಯುವಾಗಲೇ ಬರ್‍ರನೆ ಹಾದುಹೋದ ಎಸ್.ಐ. ಧನಂಜಯನ ಕಾರಿನಲ್ಲಿ ವೀಣಾ ಕಂಡಳು. ಮತ್ತೆ ಅವನೆಲ್ಲಿ ಬಿಟ್ಟ.. ಸಾಬಿನಾ? ಅನುಮಾನಿಸಿದ ಸೀನ. ಹಾಸ್ಟಲ್‌ಗೆ ಬಿಟ್ಟಿರ್ತಾನೆ..... ಅವನ ವುಡ್ಬಿ ಸಾಲಾ...ಅಲ್ವಾ? ನಿಟ್ಟುಸಿರು ಬಿಟ್ಟ ಶಾಮ. ಫೈಟ್ ಮಾಡಿ ತುಂಬಾ ಟಯರ್ಡ್ ಆಗಿದ್ದೀವಮ್ಮ ಶಾಮ...... ನೈಂಟಿ ಹಾಕ್ಕೋ ಮಗಾ ಗೆಳೆಯರು ಗೋಗರೆದರು. ಎಲ್ಲರ ಕಾಲುಗಳೀಗ ಬಾರ್‌ನತ್ತ.

***



ಶವದ ಜೇಬಲ್ಲಿ ಎಸ್.ಐ. ಧನಂಜಯ ತಡಕಾಡಿದಾಗ ಒಂದು ಲೆಟರ್ ಸಿಕ್ಕಿತು. ಎಸ್.ಐ. ಸುತ್ತ ಪೇದೆಗಳು ನೊಣದಂತೆ ಮುತ್ತಿಕೊಂಡರು. ಶಾಮನ ಗ್ಯಾಂಗೂ ಸನಿಯ ಬಂತು. ಏನಿದೆ ಲೆಟರಲ್ಲಿ ಮಾಸ್ರೆ? ಶಾಮ ಗತ್ತಿನಿಂದಲೇ ಕೇಳಿದ. ನನ್ನ ಸಾವಿಗೆ ಯಾರೂ ಕಾರಣರಲ್ಲ. ಜೀವನದಲ್ಲಿ ಜಿಗುಪ್ಸೆ ಬಂದು ಸಾಯುತ್ತಿದ್ದೇನೆ. ಮಾಫ್ ಕರ್ನಾ ಅಂತ ಅವರಪ್ಪ ಅಮ್ಮಂಗೆ ಲವ್‌ಲೆಟರ್ ಬರ್ದಿದಾನೆ. ಸರ್ಕಾಗ್ರಯ್ಯ ಅತ್ತ ನಗುತ್ತಲೇ ಗದರಿಕೊಂಡ ಎಸ್.ಐ. ಅಲ್ಲ ಸಾಹೇಬ್ರೆ, ಇವನು ಇಮ್ರಾನ್ ಅಲ್ಲವರಾ? ಶಾದಿ ಮಾಡೋಕೆ ನೀವೂ ಒಪ್ಪಿದ್ರಿ! ಹಂಗಾರೂ ಏಕೆ ಸತ್ತ ಗಾಂಡೂ ನನ್ಮಗ? ಸೀನನ ಅನುಮಾನದ ಕೊಶ್ಚನ್ ಹಾರಿತು. ಕೆಲವು ಪ್ರಶ್ನೆಗಳಿಗೆ ಉತ್ತರ ಇರಲ್ಲ ಕಣ್ರಿ. ನೀವು ಹೋದ್ಮೇಲೆ ನಾನೂ ಕೂರಿಸಿಕೊಂಡು ಬುದ್ಧಿ ಹೇಳ್ದೆ. ಮದುವೆ ಆಗೋವಾಗ ಹೀಗೆಲ್ಲಾ ಬೀದೀಲಿ ಸುತ್ತಬೇಡಿ ಅಂತ..... ಯಾಕೆ ಈಥರಾ ಮಾಡ್ಕೊಂಡ್ನೋ? ಅದೇಸಾ, ಕೆಲವು ಪ್ರಶ್ನೆಗಳಿಗೆ ಜವಾಬೇ ಸಿಕ್ಕಿಕ್ಕಿಲ್ಲವೋ! ವ್ಯಂಗ್ಯವಾಗಂದದ್ದು ಬಕರ್ಲಿ ಕಿಟ್ಟಿ. ಎಕ್ಸಾಕ್ಟಿಲಿ ಕರೆಕ್ಟ್, ಎನಿ ಹೌ ತುಂಬಾ ಥ್ಯಾಂಕ್ಸರಪ್ಪ ಕೆಲವರ ಕೈಕುಲುಕಿದ ಹಿಗ್ಗಿನಿಂದ ಎಸ್ಐ ಯಾಕ್ಲಾ! ಥ್ಯಾಂಕ್ಸು? ತಬ್ಬಿಬ್ಬಾಯಿತು ಪೂರಾ ಗ್ಯಾಂಗು. ಸೂಯಿಸೈಡ್ ಮಾಡಿಕೊಳ್ಳೋರೆಲ್ಲಾ ಹೇಡಿಗಳಿರ್ತಾರೆ. ಇಲ್ಲ, ಸೈಕಿಕ್‌ಗಳು... ಎಸ್.ಐ.ನ ಮಾತಿಗೂ ಥ್ಯಾಂಕ್ಸ್.. ಖುಷಿಗೂ ಸಿಂಕ್ ಆಗದೆ ಇವರಿಗೆಲ್ಲಾ ಒಂತರಾ ಮಂಕು. ನಮಗೆ ತುಂಬಾ ಕೆಲಸ ಇದೆ ಕಣ್ರಯ್ಯಾ. ಮಹಜರು ಮಾಡಿ ಬಾಡಿನಾ ಪಿ.ಎಂಗೆ ಕಳಿಸ್ಬೇಕು. ಅವರ ಮಾ ಬಾಪ್‌ಗೆ ಖಬರ್ ಮುಟ್ಟಿಸಬೇಕು. ಬರೋವರ್ಗೂ ಬಾಡಿನಾ ಕೋಲ್ಡ್ ಸ್ಟೋರೇಜ್ನಲ್ಲಿ ಇರಿಸ್ಬೇಕು...... ನಮ್ಮ ಕರ್ಮ. ನೀವು ಮೊದ್ಲು ಇಲ್ಲಿಂದ ರೈಟ್ ಹೇಳಿ. ಇವನ ಮೇಲೆ ನೀವು ಹಲ್ಲೆ ಮಾಡಿದ ನೆನಪಿದೆ ತಾನೆ? ಲಟ್ಟದಲ್ಲೇ ಸನ್ನೆಮಾಡಿ ತಳ್ಳಿದ ಎಸ್ಐ.

ಇಡೀ ಗ್ಯಾಂಗ್‌ಗೆ ಹೊಟ್ಟೆಯಲ್ಲೆಲ್ಲಾ ಎಸ್.ಐ. ಕೈಹಾಕಿ ಗುರಾಡಿದಂತಾಯಿತು. ವಾಟ್ ಎಬೌಟ್ ಯುವರ್ ಸಿಸ್ಟರ್ ಸಾರ್? ಎಂದು ತುದಿನಾಲಿಗೆಯ ಮೇಲೆ ಬಂದ ಮಾತನ್ನು ಯಾಕೋ ಈಚೆ ಹಾಕುವ ಧಂ ಸಾಲದೆ ಹಾಗೇ ಒಳಗೆಳೆದು ಸಮಾಧಿ ಮಾಡಿ ಗೆಳೆಯರೊಡನೆ ಬೆಳಗಿನ ಕಾಫಿ ಸವಿಯಲು ಹೋಟಲತ್ತ ಮಂಕಾಗಿ ಹೆಜ್ಜೆಹಾಕಿದ ಶಾಮ. ಯಾಕೋ ಡಲ್ ಆಗಿದೀಯ ಗುರು? ಸೀನನ ಕಾಳಜಿ. ಬಿಡುಮಗಾ ಚಿಂತೆಯಾತಕ್ಕೆ? ಹೆಂಗೂ ಆ ಹುಡ್ಗ ಹುಡ್ಗಿ ಮದುವೆ ಆಗಲಿಲ್ಲವಲ್ಲವೋ.....ನಾವೇ ಗೆದ್ದಂಗೆ...ಅಲ್ಲವೋ? ವಿ ಶೇಪ್ ಮಾಡಿದ ಬೆರಳುಗಳನ್ನು ತೋರಿ ಬಕರ್ಲಿ ಕಿಟ್ಟಿ ನಕ್ಕ. ಶಾಮನ ಮೊಬೈಲ್, ಯೆ ಮೇರೆ ವತನ್ ಕಿ ಲೋಗೋ ಆಂಖೋ ಮೆ ಭರಲೋ ಪಾನಿ..... ಯಾದ್ ಕರೋ ಖುರ್‌ಬಾನಿ ಹಾಡುವಾಗ ಯಜಮಾನ್ರುದು ಕಣ್ರೋ ಎಂದು ತಟ್ಟನೆ ಎತ್ತಿದ. ನಮಸ್ಕಾರ ಧಣಿ ನಿಂತಲ್ಲೇ ಬಾಗಿ ಗೌರವ ಸೂಸಿದ. ಹೊಯ್, ಥ್ಯಾಂಕ್ಸ್ ಟು ಎವರಿ ಬಡಿ ಮೈ ಬಾಯ್ಸ್... ಕೀಪ್ ಇಟ್ ಅಪ್ ಗೊಗ್ಗರ ದನಿಯಲ್ಲಿ ನಕ್ಕ ಯಜಮಾನರು ಸ್ವಿಚ್ ಆಫ್ ಮಾಡಿ ಕೊಂಡರು. ಏನಂದ್ರು ಯಜಮಾನ್ರು? ಉಳಿದವರ ಕಾತರ. ಶಾಮ ಅವರು ಹೇಳಿದನ್ನೇ ರಿಪೀಟ್ ಮಾಡಿದ. ಏನ್ರಯ್ಯ ಅದು ಆ ಇನ್ಸ್‌ಪೆಕ್ಟರ್ ಥ್ಯಾಂಕ್ಸ್ ಹೇಳ್ತಾನೆ? ಯಜಮಾನ್ರೂ ಹೇಳ್ತಾರೆ... ಅಂತದ್ದೇನು ಕಿತ್ತುಹಾಕಿದ್ದು ನಾವು? ಎಲ್ಲರೂ ಒಮ್ಮೆಲೇ ಭಯಂಕರ ಕನ್‌ಫ್ಯೂಸಲ್ಲಿ ಬಿದ್ದರು.

ಮರುದಿನ ಪತ್ರಿಕೆಯನ್ನಲಂಕರಿಸಿದ ಸುದ್ದಿ ಹೀಗಿತ್ತು. ರೇಲ್ವೇ ಟ್ರಾಕ್‌ನ ಬದಿ ಸಿಕ್ಕ ಶವ ಇಮ್ರಾನ್ ಎಂಬ ಮೆಡಿಕಲ್ ವಿದ್ಯಾರ್ಥಿಯದಾಗಿದ್ದು, ಈತ ಹೈದರಾಬಾದ್‌ನ ರಾಜಮಂಡ್ರಿಯವನೆಂದು ತಿಳಿದುಬಂದಿದ್ದು, ಈತನ ಸಾವು ಆತ್ಮಹತ್ಯೆಯಲ್ಲ ಕೊಲೆ ಎಂಬ ಅನುಮಾನ ಮೂಡಿಸಿದೆ. ಬಾಡಿ ಮೇಲೆ ಯಾರೋ ಹಲ್ಲೆ ಮಾಡಿದ ಕಲೆಗಳಿದ್ದು ಡೆತ್‌ನೋಟ್ ಸಹ ಕನ್ನಡದಲ್ಲಿರು ವುದು ಹಲವು ಸಂಶಯಗಳನ್ನು ಹುಟ್ಟುಹಾಕಿದೆ. ಮಲ್ಪೆ ಬೀಚ್ ಬಳಿ ಇಮ್ರಾನ್ ಮೇಲೆ ಒಂದು ಗುಂಪಿನವರು ಹೊಡೆದಾಡಿದ್ದರೆಂಬ ಸುದ್ದಿ ಅಲ್ಲಿನ ಪ್ರವಾಸಿಗ ರಿಂದ ತಿಳಿದು ಬಂದಿದ್ದು, ಅವರೇ ಕೊಂದು ಶವವನ್ನು ರೇಲ್ವೇ ಹಳಿಗಳ ಮೇಲೆ ಮಲಗಿಸಿರಬಹುದೆಂದು ಪೊಲೀಸ್ ಇಲಾಖೆ ಅನುಮಾನಿಸಿದೆ. ಹಲ್ಲೆಕೋರ ರನ್ನು ಇಪ್ಪತ್ತುನಾಲ್ಕು ಗಂಟೆಯೊಳಗೆ ಬಂಧಿಸಬೇಕೆಂದು ಎಸ್.ಪಿ. ಬಿರಾದಾರ್ ತಾಕೀತು ಮಾಡಿದ್ದು ಅದರ ಹೊಣೆಗಾರಿಕೆಯನ್ನು ದಕ್ಷ ಅಧಿಕಾರಿ ಎಸ್.ಐ. ಧನಂಜಯ ಅವರಿಗೆ ವಹಿಸಲಾಗಿದೆ. ಬೆಳಗಿನ ಪತ್ರಿಕೆಗಳನ್ನೂ ಓದಿಕೊಂಡ ಶಾಮ ಅವನ ಗ್ಯಾಂಗ್ ಬೆಡ್ ಕಾಫಿಯನ್ನೂ ಹೀರದೆ ಎದ್ದೆನೋ ಬಿದ್ದೆನೋ ಎಂಬಂತೆ ಡೆಡ್‌ಎಂಡ್ ಹಿಲ್ ಬಳಿ ಓಡಿ ಬಂದರು. ಶಾಮನೇ ಅವರಿಗೆಲ್ಲಾ ಧೈರ್ಯ ಹೇಳುತ್ತಾ ಯಜಮಾನರಿಗೆ ಫೋನ್ ಹಚ್ಚಿದ.

ರಾಮ ನಾಮ್ ಸತ್ಯ ಹೈ ರಾಮ ನಾಮ್ ಸತ್ಯಹೈ ಎಂಬ ರಿಂಗ್ ಟೋನ್ ಮೊಳಗಿ ಮೊಳಗಿ ಸೈಲೆಂಟಾಯಿತು. ಪುನಃ ಟ್ರೈ ಮಾಡಿದ. ಮತ್ತದೇ ರಾಮ ಜಪ. ರಿಸೀವ್ ಮಾಡುತ್ತಿಲ್ಲ. ಥುತ್ ಇಸ್ಕಿ ಎಂದು ಪದೆ ಪದೆ ಬಟನ್ ಒತ್ತಿದ ಯೂಸರ್ಸ್ ಆರ್ ವೆರಿ ಬಿಜಿ ಡಯಲ್ ಆಫ್ಟರ್ ಸಮ್ ಟೈಮ್ಸ್ ಅಂದಿತು ಹೆಣ್ಣಿನ ಮಧುರ ಕಂಠ. ಐದು ನಿಮಿಷಗಳನ್ನು ಯುಗಗಳಂತೆ ಕಳೆದ ಶಾಮ ಮರಳಿ ಯತ್ನವ ಮಾಡಿದ. ಹಿ ಈಸ್ ಔಟ್ ಆಫ್ ಕವರೇಜ್ ಏರಿಯಾ ಎಂದು ಸಿಡಿಮಿಡಿಗೊಂಡಿತಾದರೂ ಬಿಡದೆ ಭಗೀರಥನಾದ ಶಾಮ. ಎಲ್ಲರ ಮೋರೆ ಕಪ್ಪಿಟ್ಟಿತು. ನಂತರ ಸ್ವಿಚ್ಡ್ ಆಫ್ ಅಂತ ಯಜಮಾನರ ಮೊಬೈಲು ಒದರಲಾರಂಭಿಸಿತು.

■